ಎಸ್.ಸಿ.ಸಂಖ್ಯೆಃ 10047/2025
ಪ್ರಾ.ಸಾ.ಸಂಖ್ಯೆಃ 07
ಚಾ.ಸಾ.ಸಂಖ್ಯೆಃ 18

**ಪೀಠಾಸೀನಾಧಿಕಾರಿಗಳು, 03 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ**

**ನ್ಯಾಯಾಧೀಶರು , ಬಾಗಲಕೋಟೆ, ಉಪಸ್ಥಿತಿಃ ಮುಧೋಳ**

ಎಸ್.ಸಿ.ಸಂಖ್ಯೆಃ10047/2025

| | |
|---|---|
| ಹೆಸರುಃ | ಮಲ್ಲಿಕಾರ್ಜುನ ಬಿರಾದಾರ |
| ತಂದೆಯ ಹೆಸರುಃ | ಭೀಮಶಿ ಬಿರಾದಾರ |
| ವಯಸ್ಸುಃ | 50 ವರ್ಷ |
| ಉದ್ಯೋಗಃ | ಪಿ.ಐ.ಲೋಕಾಯುಕ್ತ ಪಿ.ಎಸ್., ಬಾಗಲಕೋಟೆ |
| ವಾಸಃ | ಬಾಗಲಕೋಟೆ. |

**ಸಾಕ್ಷಿಯನ್ನು ದಿಃ 19.12.2025 ರಂದು ವಿಸಿ ಮೂಲಕ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರವರಿಂದಃ-**

ನಾನು ದಿಃ 06.11.2019 ರಿಂದ ದಿನಾಂಕಃ 02.04.2021 ರವರೆಗೆ ಮುಧೋಳ ಪೋಲೀಸ ಠಾಣೆಯ ಪಿ.ಎಸ್.ಐ. ಆಗಿ ಕೆಲಸ ಮಾಡಿದ್ದೇನೆ.

1. ನಾನು ದಿನಾಂಕಃ01.03.2021 ರಂದು ಚಾಸಾ-17 ಇವರ ಕಡೆಯಿಂದ ಈ ಪ್ರಕರಣದ ಮುಂದಿನ ತನಿಖೆಯನ್ನು ವಹಿಸಿಕೊಂಡಿದ್ದು, ಅದುವರೆಗೆ ಆದ ತನಿಖೆಯನ್ನು ಪರಿಶೀಲಿಸಿದ್ದೇನೆ. ದಿನಾಂಕಃ

09.03.2021 ರಂದು ಈ ಪ್ರಕರಣದ ಆರೋಪಿ 1 ಇವರನ್ನು ವಿಜಯಪುರದಲ್ಲಿ ವಶಕ್ಕೆ ತೆಗೆದುಕೊಂಡು ಬಂದು ವಿಚಾರಿಸಿದೆ. ವಿಚಾರಣೆಯಲ್ಲಿ ಆರೋಪಿ ಒಪ್ಪಿಕೊಂಡಿದ್ದರಿಂದ ಅವರನ್ನು ಬಂಧಿಸಿ ನ್ಯಾಯಾಂಗ ಬಂಧನಕ್ಕೆ ಕಳುಹಿಸಿಕೊಟ್ಟೆ

2. ದಿನಾಂಕಃ 11.03.2021 ರಂದು ಚಾಸಾ-4 ಇವರಿಗೆ ಆಗಿರಬಹುದಾದ ಗಾಯಗಳ ಬಗ್ಗೆ ಪರೀಕ್ಷೆ ಮಾಡಿ ಮಾಹಿತಿ ನೀಡಲು ಕೋರಿದೆ. ಅವರು ಈ ಬಗ್ಗೆ ಸ್ಪಷ್ಟವಾದ ಅಭಿಪ್ರಾಯ ನೀಡಿಲ್ಲ. ದಿನಾಂಕಃ 20.03.2021 ರಂದು ಗುನ್ನಾ ಜಾಗೆಯ ಉತಾರ ಪೂರೈಸಲು ನಗರಸಭೆಯವರಿಗೆ ಪತ್ರ ಬರೆದೆ. ನಂತರ ದಿನಾಂಕಃ 30.03.2021 ರಂದು ನನಗೆ ಅನಾರೋಗ್ಯದ ಕಾರಣ ರಜೆಯ ಮೇಲೆ ಹೋಗಬೇಕಾಗಿದ್ದುದರಿಂದ ಮುಂದಿನ ತನಿಖೆಯನ್ನು ಪಿಎಸ್ ಐ ಕೆ.ಬಿ. ಮಾಂಗ ಇವರಿಗೆ ವಹಿಸಿದೆ. ಈಗ ನಾನು ನ್ಯಾಯಾಲಯದ ಮುಂದಿರುವ ಆರೋಪಿ 1 ಇವರನ್ನು ಗುರುತಿಸುತ್ತೇನೆ.

**ಪಾಟೀ ಸವಾಲುಃ 1 ನೇ ಆರೋಪಿಯ ಪರವಾಗಿ ಶ್ರೀ.ಎಸ್.ಐ.ಎಚ್. ವಕೀಲರಿಂದಃ-**

1. ನಾನು ಮುಖ್ಯ ಸಾಕ್ಷಿಯಲ್ಲಿ ಹೇಳಿದಂತೆ ಆರೋಪಿ ಇವರನ್ನು ವಿಜಯಪುರದಿಂದ ಬಂಧಿಸಿಲ್ಲ, ಆರೋಪಿ 1 ತಪ್ಪೊಪ್ಪಿಗೆ ನೀಡಿಲ್ಲ ಎಂದರೆ ಸರಿಯಲ್ಲ. ಚಾಸಾ-4 ಇವರಿಗೆ ಆದ ಗಾಯಗಳ ಬಗ್ಗೆ ನಾನು ಮಾಹಿತಿ

ಕೋರಿಲ್ಲ ಎಂದರೆ ಸರಿಯಲ್ಲ. ನಗರಸಭೆಯವರಿಗೆ ಉತಾರ ನೀಡಲು ಪತ್ರ ಬರೆದೆ ಅಂತಾ ಸುಳ್ಳು ಹೇಳಿದ್ದೇನೆ ಎಂದರೆ ಸರಿಯಲ್ಲ. ಕೇವಲ ಚಾಸಾ-17 ಹಾಗೂ 19 ಇವರ ಮಾತು ಕೇಳಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು:** 2 ರಿಂದ 4 ನೇ ಆರೋಪಿತರ ಪರ ವಕೀಲರು ಇದೇ ಪಾಟೀ ಸವಾಲನ್ನೇ ಅಳವಡಿಸಿಕೊಳ್ಳುತ್ತಾರೆ.

**ಮರು ವಿಚಾರಣೆ: ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ.ಹೇ.ಕೇ. ಸರಿ ಅದೆ.**

Sd/-

**3 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಮುಧೋಳ.**